ವೃತ್ತಿಶಿಕ್ಷಣ ಶಾಲೆಗಳನ್ನು ಜಾಸ್ತಿಮಾಡಬೇಕಾದದ್ದು ಅಗತ್ಯವೆಂದು ಒಪ್ಪುತ್ತೇನೆ. ಆದರೆ ಸರ್ಕಾರದವರು ಒಂದುಕಡೆ ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು, ಇನ್ನೊಂದು ಕಡೆ ಇವುಗಳಿಂದಾಗುವ ಪ್ರಯೋಜನವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಭದ್ರಾವತಿಯಲ್ಲಿರುವ ಈ ಶಾಲೆಯ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಮೊದಲನೆಯ ವರ್ಷ ಎಲ್ಲರಿಗೂ ಅರ್ಜಿಹಾಕಿಕೊಳ್ಳಬೇಕೆಂದು ಗೆಜೆಟ್ಟಿನಲ್ಲಿ ಕರೆದಾಗ ಡಿಪ್ಲೊಮ ಭಾಗಕ್ಕೆ 25 ಸ್ಥಾನಗಳಿಗೂ ಸರ್ಟಿಫಿಕೇಟ್ ಶಾಲಾಭಾಗಕ್ಕೆ 25 ಸ್ಥಾನಗಳಿಗೂ ಅವಕಾಶಮಾಡಿತ್ತು. ಸರ್ಟಿಫಿಕೇಟ್ ಕೋರ್ಸ್ ಎಂದರೆ ಕೈಯಲ್ಲಿ ಕಷ್ಟಪಟ್ಟು ಕೆಲಸಮಾಡುವ ವೃತ್ತಿಯನ್ನು ಕಲಿಯುತ್ತಾರೆ; ಡಿಪ್ಲೊಮಾ ಕೋರ್ಸ್ ಎಂದರೆ ಸರ್ಟಿಫಿಕೇಟ್ ತೆಗೆದುಕೊಂಡು ಸ್ಯೂಪರ್‌ವೈಸಾಕಿಕೊಂಡು ಜೇಬಿನಲ್ಲಿ ಕೈಯಿಟ್ಟುಕೊಂಡು ಸೂಪರ್‌ವೈಸ್ ಮಾಡಿಕೊಂಡು ತಿರುಗುವವರು. ಅರ್ಜಿಗಳು ಬಂದಿದ್ದನ್ನು ನೋಡಿದ್ದರಲ್ಲಿ ಡಿಪ್ಲೊಮಾ ಕೋರ್ಸಿಗೆ 25 ಸ್ಥಾನಗಳಿಗೆ 300 ಅರ್ಜಿಗಳೂ, ಸರ್ಟಿಫಿಕೇಟ್ ಕೋರ್ಸಿಗೆ 25 ಸ್ಥಾನಗಳಿಗೆ 3 ಅರ್ಜಿಗಳೂ ಬಂದಿದ್ದವು. ಇದನ್ನು ನೋಡಿ ಪುನಃ ಒಮ್ಮೆ ಗೆಜೆಟ್ಟಿನಲ್ಲಿ ಪ್ರಕಟಿಸಿ ಸರ್ಟಿಫಿಕೇಟ್ ಕೋರ್ಸಿನಲ್ಲಿ ತೇರ್ಗಡೆ ಹೊಂದಿದವರಿಗೆ ಸರ್ಕಾರಿ ಕಾರ್ಖಾನೆಗಳಲ್ಲಿ ಕೆಲಸಕೊಡುತ್ತೇವೆಂಬ ಭರವಸೆಯನ್ನೂ ಕೊಟ್ಟೆವು. ಆಗಲಾ ಮೂರು ಅರ್ಜಿಗಳಿಗಿಂತ ಜಾಸ್ತಿ ಬರಲಿಲ್ಲ. ಈರೀತಿ ಸರ್ಟಿಫಿಕೇಟ್ ಕೋರ್ಸ್ ಗಳಿಗೆ ಯಾರೂ ಬರುವುದಿಲ್ಲ ಅದ್ದರಿಂದ ಜನರ ಮನೋಭಾವ ಬದಲಾವಣೆಯಾದ ಹೊರತು ನೀವು ಎಷ್ಟು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಷನ್‌ಗಳನ್ನು ಮಾಡಿದರೂ ಪ್ರಯೋಜನವಿಲ್ಲ. ಇವೊತ್ತಿಗೂ ಬೇಕಾದರೆ ಮಲೆನಾಡು ಪ್ರದೇಶಗಳಿಗೆ ಹೋಗುವುದಾದರೆ 25,000 ಜನರಿಗೆ ಕೆಲಸ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಅದರೆ ಆ ಕೆಲಸಗಳನ್ನು ಮಾಡುವುದಕ್ಕೆ ಜನರು ಸಿದ್ಧರಾಗಿಲ್ಲ. ರಸ್ತೆಕೆಲಸ, ಬಾವಿಯಕೆಲಸ ಮುಂತಾದುವು ಎಷ್ಟೋ ಇವೆ, ಆದರೆ ಅಂಥ ಕಷ್ಟದ ಕೆಲಸಗಳು ಜನರಿಗೆ ಬೇಕಿಲ್ಲ. ಅವರಿಗೆ ಯಾವ ಕೆಲಸಬೇಕೆಂದು ಹೇಳಿದರೆ, ಇಜಾರಹಾಕಿಕೊಂಡು, ಹ್ಯಾಟ್‌ಹಾಕಿಕೊಂಡು ಸೂಪರ್‌ವೈಜ್‌ಮಾಡುವ ಕೆಲಸ; ಅದಕ್ಕೆ ಸಿದ್ಧತೆಯಾರಾಗಿದ್ದಾರೆ. ಅದ್ದರಿಂದ ಸದ್ಯಕ್ಕೆ ಈಗಿರುವ ಶಾಲೆಗಳನ್ನೇ ಅಭಿವೃದ್ಧಿಪಡಿಸಿ ಅವುಗಳಿಂದ ಹೆಚ್ಚು ಪ್ರಯೋಜನ ದೇಶಕ್ಕೆ ಉಂಟಾಗುವಂತೆ ಮಾಡಬೇಕಾದದ್ದು ಅವಶ್ಯಕರ್ತವ್ಯ. ಆಮೇಲೆ ಅವಶ್ಯಕತೆಯಿದ್ದಾಗ ಮತ್ತು ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡಾಗ ತುಮಕೂರು ಜಿಲ್ಲೆಯಲ್ಲೂ ಮತ್ತು ಮಿಕ್ಕ ಜಿಲ್ಲೆಗಳಲ್ಲೂ ವೃತ್ತಿಶಿಕ್ಷಣಶಾಲೆಗಳನ್ನು ತೆರೆಯುವುದನ್ನು ಯೋಚನೆ ಮಾಡಬಹುದು. ಅಲ್ಲದೆ ತುಮಕೂರಿನ ಮಟ್ಟಿಗೆ ಅದು ಬೆಂಗಳೂರಿಗೆ 40 ಮೈಲಿ ದೂರದಲ್ಲೇ ಇದೆ. ಅಲ್ಲದೆ ಅಲ್ಲಯೇ ಒಂದು ಫಸ್ಟ್‌ಗ್ರೇಡ್ ಕಾಲೇಜುಕೂಡ ಇದೆ. ತುಮಕೂರಿನಿಂದ ಇಲ್ಲಿಗೆ ಬೆಂಗಳೂರಿಗೆ ಬರುವ ವಿದ್ಯಾರ್ಥಿಗಳಿಗೆ ಇಲ್ಲಿನ ಶಾಲೆಗಳಲ್ಲಿ ಓದುವುದಕ್ಕೆ ಅವಕಾಶವಿದೆ. ಸದ್ಯಕ್ಕೆ ಶಾಲೆಗಳನ್ನು ಜಾಸ್ತಿ ಮಾಡಲಿಕ್ಕೆ ಇರುವ ಮುಖ್ಯ ಆತಂಕವೆಂದರೆ ಹಣಕಾಸಿನ ಆತಂಕ. ಹಣಕಾಸಿನ ಪರಿಸ್ಥಿತಿ ಉತ್ತಮವಾದಾಗ ತಮ್ಮ ಪ್ರಶ್ನೆಯನ್ನು ನೋಡೋಣ. ಆದ್ದರಿಂದ ಈಗಿರತಕ್ಕ ಪರಿಸ್ಥಿತಿಯಲ್ಲಿ ತಮ್ಮ ಮನವಿಯನ್ನು ಹಾಪಸುತೆಗೆದುಕೊಳ್ಳಬೇಕೆಂದು ಹೇಳುತ್ತೇನೆ—

Sri T. N. MUDALAGIRI GOWDA.—I seek the permission of the House to withdraw my Resolution.

The Resolution was, by leave, withdrawn.

Mr. SPEAKER.—The House will now rise for lunch and meet at 3-30.

The House adjourned for Lunch at Two Minutes past Three of the Clock and reassembled at Thirty Minutes past Three of the Clock.

[Mr. SPEAKER in the Chair.]

Resolution No. 13.—Appointment of a Scheduled Castes Commission in the State.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ ಅನುಸೂಚಿತ ಜಾತಿಗಳು).—

ಸ್ವಾಮಿ, ಅಧ್ಯಕ್ಷರೆ, ನನ್ನ ಈ ನಿರ್ಣಯವನ್ನು ಸಭೆಯ ಮುಂದಿಡಲು ಅಪ್ಪಣೆ ಬೇಡುತ್ತೇನೆ. ನಿರ್ಣಯ ಈ ರೀತಿ ಇದೆ:

> "'ಷೆಡ್ಯೂಲ್ಡ್' ಪಂಗಡಗಳವರ ಸಮಸ್ಯೆಗಳನ್ನು ಪರಿಶೀಲಿಸಿ ಭಾರತದ ಸಂವಿಧಾನದ ಮೇರೆಗೆ ಅವಕಾಶ ಕೊಟ್ಟಿರುವ ಕಾಲಪರಿಮಿತಿಯಲ್ಲಿ ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಪರಿಣಾಮಕಾರಿಯೂ ಮತ್ತು ಕಾರ್ಯತಃ ಸಾಧ್ಯವಾದ ಸಾಧನೋಪಾಯಗಳನ್ನು ಸಲಹೆ ಮಾಡುವುದಕ್ಕಾಗಿ ಮೈಸೂರು ಸಂಸ್ಥಾನದಲ್ಲಿ 'ಷೆಡ್ಯೂಲ್ಡ್' ಪಂಗಡಗಳವರ ಒಂದು 'ಕಮಿಷನ್' ಮಂಡಲಿಯನ್ನು ಏರ್ಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈಗಾಗಲೇ ಸುಮಾರು ಹತ್ತಾರು ವರ್ಷಗಳಿಂದ ಹರಿಜನಾಭಿವೃದ್ಧಿಕಾರ್ಯ ಮೈಸೂರು ದೇಶದಲ್ಲಿ ಸಾಗುತ್ತಿದೆ. ಈ ಯೋಜನೆಯಲ್ಲಿರುವ ಕೆಲವು ನಿಮ್ನವರ್ಗದ ಅಭಿವೃದ್ಧಿ ಕಾರ್ಯವನ್ನು ಆಡಳಿತದವರು ಲೋಪದೋಷಗಳಿಂದ ನರಿಯಾದ ರೀತಿಯಲ್ಲಿ ಕಾರ್ಯಗತಮಾಡಲು ಅವಕಾಶವಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹರಿಜನರ ಆರ್ಥಿಕ, ಸಾಮಾಜಿಕ, ನೈತಿಕ ಮಟ್ಟಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾದ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡಿಲ್ಲ. ಸಂಸ್ಥಾನದಲ್ಲಿ ಸುಮಾರು 19 ಲಕ್ಷ ಪ್ರಜಾಸಂಖ್ಯೆಯಿರುವ ಈ ಜನಾಂಗದ ಅಭಿವೃದ್ಧಿಗೆ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯಮಾಡಲು ರಾಜ್ಯಾಂಗದ ನಿಯಮದ ಮೇರೆಗೆ ಅನುಕೂಲವಾಗುವಂತೆ ಒಂದು ಕಮಿಷನ್ ನೇಮಿಸಬೇಕೆಂದು ನಾನು ಹೇಳುತ್ತೇನೆ. ಅನೇಕ ರೀತಿಯಲ್ಲಿ ಇವರ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿದೆ. ಈ ಸಭೆಯಲ್ಲಿ ವಿಸ್ತಾರವನ್ನೂ ವಿವರಿಸಲು ಕಾಲವಕಾಶವಿಲ್ಲವಾದ್ದರಿಂದ ವಿವರಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ರಾಜ್ಯಾಂಗದಲ್ಲಿ ನಿಯಮಿತವಾಗಿರುವಂತೆ

(ಶ್ರೀ ಜಿ. ಪುಟ್ಟಸ್ವಾಮಿ.)

ಅವರ ಬಡತನವನ್ನು ನಿವಾರಿಸಿ ಅವರ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ ಸಲಹೆ ನೀಡುವುದು ಅವಶ್ಯಕ. ಸಮಾಜದಲ್ಲಿ ಅವರು ಎಷ್ಟು ಮುಂದೆ ಹಿಂದುಳಿದಿದ್ದಾರೆ, ತುಕ್ಕು ಹಿಡಿದ ಕಬ್ಬಿಣದ ಹಾಗಿದ್ದಾರೆ, ಇವರುಗಳನ್ನು ಹೇಗೆ ದೇಶೋದ್ಧಾರಕ್ಕೆ ಉಪಯೋಗಿಸಿಕೊಳ್ಳಬೇಕು, ಅವರಿಗೆ ಸರಿಯಾದ ಮಾರ್ಗವನ್ನು ತೋರಿಸಿ ಹೇಗೆ ಅವರ ಅಭಿವೃದ್ಧಿ ಕಾರ್ಯವನ್ನು ನಡೆಸಬೇಕು ಎಂಬ ಬಗ್ಗೆ ಅನೇಕ ರೀತಿಯ ಸಲಹೆಗಳನ್ನು ಮಾಡುವುದಕ್ಕೆ ಈ ಕಮಿಷನ್ ಅನುಕೂಲವಾಗುತ್ತದೆಂದು ಕೇಳುತ್ತೇನೆ. ಅವರಿಗೆ ಈಗಾಗಲೇ ಹೆಂಚುಗಳನ್ನೊದಗಿಸಿ ಮನೆಗಳನ್ನು ಕಟ್ಟುವ ಯೋಜನೆಯನ್ನು ವ್ಯಾಪಕವಾಗಿ ಹೆಚ್ಚುಮಾಡುತ್ತಿದ್ದಾರೆ. ಇದು ಸರ್ಕಾರದ ಶ್ರೀಮದ್ಧಿಯಲ್ಲದೆ. ಆದರೂ ಈ ಸೌಲಭ್ಯವನ್ನು ಪ್ರತಿಯೊಬ್ಬ ನಿಮ್ನ ವರ್ಗದವರೂ ಅನುಭವಿಸಲು ಅನುಕೂಲವಾಗಿಲ್ಲ. ಈ ವಿಷಯದಲ್ಲಿ ಈಗಾಗಲೇ ಕೆಲವು ಮಾನ್ಯ ಸದಸ್ಯರು ಕೆಲವು ಅಂಶಗಳನ್ನು ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅನೇಕ ಗ್ರಾಮಗಳಲ್ಲಿ ಈ ಸೌಲಭ್ಯ ದೊರೆಯುತ್ತಿಲ್ಲ. ಇದಕ್ಕೆ ಕಾರಣ ನಿರ್ದಿಷ್ಟವಾದ ಯೋಜನೆಯಿಲ್ಲದಿರುವುದು. ಎಷ್ಟು ಮನೆಗಳಾಗಬೇಕು, ಎಷ್ಟು ತಯಾರಾಗಿವೆ. ಎಷ್ಟು ಗ್ರಾಂಟು ಒದಗಿಸಬೇಕು ಎಂಬ ಬಗ್ಗೆ ಒಂದು ಯೋಜನೆಯಿಲ್ಲದಿರುವುದು ಈ ಕೆಲಸಕ್ಕೆ ತುಂಬ ಕಷ್ಟವಾಗಿದೆ. ಹೀಗೆಯೇ ಇತರ ಕೆಲಸಗಳಿಗೂ ಸರಿಯಾದ ಯೋಜನೆಯನ್ನು ಹಾಕಿಕೊಂಡು ಅಭಿವೃದ್ಧಿ ಸಾಧಿಸಲು ಅನುಕೂಲವಾಗುವಂತೆ ಒಂದು ಕಮಿಷನ್ ನೇಮಕವಾಗಬೇಕು. ಮೈದಾನ ಪ್ರದೇಶದ ನಿಮ್ನ ವರ್ಗದವರ ಸಮಸ್ಯೆಗಳಿಗೂ ಮಲೆನಾಡು ಪ್ರದೇಶದ ನಿಮ್ನ ವರ್ಗದವರ ಸಮಸ್ಯೆಗಳಿಗೂ ಬಹಳ ವ್ಯತ್ಯಾಸವಿದೆ. ಮೈದಾನದಲ್ಲಿರುವವರು ಈಗಾಗಲೇ ಕೆಲವು ಸೌಲಭ್ಯಗಳನ್ನೊದಗಿಸಿಕೊಂಡು, ಸರ್ಕಾರಿ ನೌಕರಿ ಮತ್ತು ಇತರ ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ಬರುತ್ತಿದ್ದಾರೆ. ಆದರೆ ಮಲೆನಾಡಿನವರ ಪರಿಸ್ಥಿತಿಯೇ ಬೇರೆಯಾಗಿದೆ. ಇತ್ತೀಚೆಗೆ ಎಚ್ಚೆತ್ತುಕೊಂಡು ವಿದ್ಯಾಭ್ಯಾಸ ಮುಂತಾದ ಸೌಲಭ್ಯಗಳನ್ನನುಭವಿಸಿಕೊಂಡು ಬರುತ್ತಿದ್ದಾರೆ. ಆದ ದರಿಂದ ಮಲೆನಾಡಿನವರಿಗೇ ಪ್ರತ್ಯೇಕವಾಗಿ ವಿಶೇಷ ಸೌಲಭ್ಯಗಳನ್ನೊದಗಿಸಬೇಕೆಂದು ಹೇಳುತ್ತೇನೆ. ಈ ಸವಿನತಿ ನೇಪಕವಾಗುವುದಾದರೆ, ಈ ಒಂದು ದೃಷ್ಟಿಯನ್ನಿಟ್ಟುಕೊಂಡ ಮಲೆನಾಡು ಹರಿಜನರ ಅಭಿವೃದ್ಧಿಗೆ ವಿಶೇಷ ಸಲಹೆಗಳನ್ನು ಕೊಡಲು, ಸೌಲಭ್ಯಗಳನ್ನೊದಗಿಸಲು ಸಹಾಯವಾಗುತ್ತದೆಂದು ಸೂಚಿಸುತ್ತೇನೆ. ಮಲೆನಾಡಿನಲ್ಲಿರುವ ನಿವ್ನ ತರಗತಿಯವರ ಸ್ಥಿತಿಗತಿಗಳು 'ಹಿನ್ನೆಲೆ ಪ್ರಬಂಧ' ಅಥವಾ ಗಡ್ಡನಾಡಿನ ಜನರಿಗಿಂತಲೂ ಶೋಚನೀಯವಾಗಿವೆ. ಇವರ ಬಗ್ಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇಷ್ಟು ಹೇಳಿ ನಾನು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that a Scheduled Castes Commission be appointed in Mysore State so as to investigate into their problems and to suggest effective and workable ways and means to ameliorate their conditions within the time limit allowed under the Constitution."

The Minister, Sri Kadidal Manjappa.

ಶ್ರೀ ಎಂ. ಮಾದಯ್ಯ.—(ನಂಜನಗೂಡು ಅನುಸೂಚಿತ ಜಾತಿಗಳು).—ಹೀಗೆ ಮಾಡುವುದಾದರೆ, ಚರ್ಚೆಗಳು ಬಹಳ dull ಆಗುತ್ತವೆ. ನಾನು ಬೇಕಾದರೆ ಆ ಪದವನ್ನು ವಾಪಸು ತೆಗೆದುಕೊಳ್ಳುತ್ತೇನೆ.

Mr. SPEAKER.—I feel there are some resolutions—I went through them carefully—involving a question of policy. On Sales-Tax there are about five resolutions. On prohibition which involves policy, there are five or six resolutions. Again on the question of linguistic provinces there are five resolutions.. These three categories involve questions of policy. The question of Linguistic Provinces may not be reached even by tomorrow. In regard to the other resolutions, I think it is sufficient if one member speaks on the subject and the Minister concerned replies. That is the procedure that has been followed till now.

ಶ್ರೀ ಎಂ. ಮಾದಯ್ಯ.—ಅಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳಬೇಕೆಂದಿದ್ದೇನೆ. ಚರ್ಚೆಗೆ ಬರುವ ನಿರ್ಣಯಗಳು ಬರಿಯ ಸ್ಥಳೀಯ ವಿಚಾರಕ್ಕೆ ಸಂಬಂಧಪಟ್ಟವ್ಯಾಗಿದ್ದರೆ, ಸರ್ಕಾರದವರು ಉತ್ತರಕೊಟ್ಟರೆ ಸಾಕು. ಆದರೆ ಹರಿಜನರ ಪ್ರಶ್ನೆ, ನಿಮ್ನ ವರ್ಗದವರಿಗೆ ಸಂಬಂಧಪಟ್ಟ ಪ್ರಶ್ನೆಯಾದರೆ, ಅಂಥಾ ಸಂದರ್ಭದಲ್ಲಿ ಅಧ್ಯಕ್ಷರು ಉದಾರವಾಗಿ ಹೆಚ್ಚು ಅವಕಾಶಕೊಡಬೇಕು

I request the Chair to exercise his discretion liberally.

Sri J. MOHAMED IMAM (Jagalur).—I want to make a proposal. The resolutions concerning local grievances, I think, can be withdrawn for the present, as these are matters which have already been dealt with previously in the course of cut motions —for example, Sri Madiah said just now that the Harijan question is very important; of course, it is important but has been discussed sufficiently. My suggestion is: tomorrow we can withdraw all the resolutions which are concerned with local grievances and confine ourselves to one of the improtant resolutions which deals with policy or example—Prohibition or Linguistic

Provinces. Discussion on these will be of a high order and will be more interesting. That is my suggestion.

Mr. SPEAKER.—From resolution No. 13 to No. 25, there is only one, No. 23, which deals with local affairs. All others are of a general nature. Nearly 12 resolutions are over today and good progress has been made. Regarding resolutions of a local nature, one member will do. Regarding the present resolution dealing with the Scheduled Castes Commission, two or three members may speak. It is also of a general nature, but not exceeding two or three members may speak because seven to eight members took part on the same subject under cut motions. Sri Gopal Gowda, have you any suggestions?

Sri S. GOPALA GOWDA (Sagar-Hosanagar).—I have no suggestions to make, Sir.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸೇರ್ಸ್‌ಟ್ಯಾಕ್ಸ್ ಸಂಬಂಧವಾಗಿ ಒಂದು ಸಮಿತಿ ಏರ್ಪಾಡಾಗಿದೆ. ಆದುದರಿಂದ ಅದಕ್ಕೆ ಸಂಬಂಧ ಪಟ್ಟದ್ದನ್ನು ಚರ್ಚೆಮಾಡುವ ಅವಶ್ಯಕತೆಯಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಇದು ಬಹಳ ಮುಖ್ಯವಾದ ವಿಚಾರ. ನಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗಿದೆ.

ಶ್ರೀ ಎಂ. ಮಾದಯ್ಯ.—ನನಗೆ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ಮನಃ ಪೂರ್ವಕವಾಗಿ ವಂದಿಸಬೇಕಾಗಿದೆ.

Mr. SPEAKER.—No Member need thank the Speaker. I simply carry on the desire and wishes of Members.

*ಶ್ರೀ ಎಂ. ಮಾದಯ್ಯ.—ಸ್ವಾಮಿ, ಇದರ ಆವಶ್ಯಕತೆಯ ವಿಚಾರ ಪದೇ ಪದೇ ಶಾಸನಸಭೆಯ ಮುಂದೆ ಬರುತ್ತಿದೆ. ಏನೋ ಒಂದು ಉತ್ತರವನ್ನು ಹೇಳಿ ಸುಮ್ಮನೆ ಆಗುವುದು ಅಷ್ಟು ಸಾಧುವಲ್ಲ, ಸರಿಯಿಲ್ಲ ಎಂದು ಹೇಳಬೇಕಾಗಿದೆ. ಒಂದಲ್ಲ ಇನ್ನೊಂದು ರೂಪದಲ್ಲಿ ಒತ್ತಾಯ ಬರುತ್ತಿದ್ದರೂ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡದೇಯಿದ್ದರೆ ಬಹಳ ಸದುದ್ದೇಶದಿಂದ ಏನು ನಿರೀಕ್ಷಣೆ ಮಾಡುತ್ತೇವೋ ಅದು ಆಗದೇ ಹೋಗುತ್ತದೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಸರ್ಕಾರದವರು ಉತ್ತರ ಕೊಡುವಾಗ ನಿಜವಾಗಿಯೂ ಒಳ್ಳೆಯ ಮನಸ್ಸಿನಿಂದ with the best of intentions ಕೊಡುತ್ತಾರೆಂದು ಹೇಳುತ್ತಿದ್ದೆ. ಈಗಲೂ ಅದನ್ನೇ ಹೇಳುತ್ತೇನೆ. ಯಾವ ವಿಷಯದಲ್ಲಿ ಯಾವ ರೀತಿ ಮಾಡಬೇಕೆಂದು ಒಂದು ಮಾರ್ಗವನ್ನು ತೋರಿಸಿದರೆ ಆ ರೀತಿ ಮಾಡುತ್ತಾರೆಂದು ನಂಬಿಕೆಯಿದೆ. ಒಂದು ವಿಷಯವನ್ನು ಯತ್ನವಿಲ್ಲದೆ ಹೇಳಬೇಕಾಗಿದೆ. ಪೋಕ್ತಾನಿರ್ಣಯ ಚರ್ಚೆಯಾದ ಸಮಯದಲ್ಲಿ ಸರ್ಕಾರದ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಉತ್ತರಕೊಡುವಾಗ ಒಂದು ಕ್ಷೇಮದಲ್ಲಿ ಉತ್ತರ ಕೊಟ್ಟರು. ಆ ರೀತಿ ಉತ್ತರ ಕೊಟ್ಟರೆ ನಿಜವಾಗಿಯೂ ನಿರುತ್ಸಾಹವುಂಟಾಗುತ್ತದೆಯೋ ಏನೋ ಅನ್ನಿಸುತ್ತದೆ. ಉದ್ದೇಶ ಚೆನ್ನಾಗಿರಬಹುದು, ಮನಸ್ಸು ಚೆನ್ನಾಗಿರಬಹುದು. ಆದರೆ ಅದನ್ನು ಹೇಳುವ ಗ, ಅದರಲ್ಲಿಯೂ ಇಂಥ ಸಭೆಯಲ್ಲಿ ಹೇಳುವಾಗ ಒಳ್ಳೆಯ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ ಅಲ್ಲದೆ ಕೇಳತಕ್ಕ ಸದಸ್ಯರಿಗೆ ನಿರುತ್ಸಾಹವಾಗುವ ರೀತಿಯಿಲ್ಲಿರಬಾರದು. ಆ ಕ್ಷೇತ್ರಾನಿರ್ಣಯದ ಮೇಲೆ ಮಾತನಾಡುವ ಕಾಲದಲ್ಲಿ, 'ಬೇಕಾದಷ್ಟು ಮಾಡಿದ್ದೇವೆ, ಅದನ್ನು ಮಾಡ್ದೇವೆ, ಇದನ್ನು ಮಾಡಿದ್ದೇವೆ' ಎಂದು ಲೋಕಾಭಿರಾಮವಾಗಿ ಮಾತನಾಡಿದರು...

ಶ್ರೀ ಟಿ. ಚೆನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸ್ಪಪ್ರಯತ್ನವೂ ಇರಬೇಕೆಂದು ಹೇಳಿದೆ, ಅದರಲ್ಲಿ ತಪ್ಪೇನೂ ಇಲ್ಲ. ಸರ್ಕಾರದವರು ಹರಿಜನರಿಗೆ ಮಾಡಿರುವ ಅನುಕೂಲಗಳ ಜೊತೆಗೆ ಅವರು ಸ್ವಪ್ರಯತ್ನವನ್ನೂ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ಇಂಡಿಯಾ ಸರ್ಕಾರದವರು ಕೆಲವು ದಿವಸಗಳ ಹಿಂದೆ ಭಾರತ ರಾಜ್ಯಾಂಗದ 340ನೆಯ ವಿಧಿಯ ಪ್ರಕಾರ ಒಂದು ಕಮಿಷನ್ ನೇಮಕಮಾಡಿದ್ದಾರೆ. ಆ ಕಮಿಷನ್ನಿನ ಕೆಲಸ ಹಿಂದುಳಿದ ಜಾಗಡವರ ಮತ್ತು ನಿಮ್ನ ವರ್ಗದವರ ಸಾಮಾಜದಲ್ಲಿ, ವಿದ್ಯಾಭ್ಯಾಸದಲ್ಲಿ ಹಿಂದೆ ಬಿದಿರುವವರ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಕೇಂದ್ರ ಸರ್ಕಾರಕ್ಕೆ ವರದಿಯನ್ನೊಪ್ಪಿಸುವುದು. ಆ ವರದಿಯನ್ನು ಪಾರ್ಲಿಮೆಂಟಿನಲ್ಲಿ ಕೂಡ ಮಂಡಿಸಿ, ಪಾರ್ಲಿಮೆಂಟಿನ ಸಲಹೆಯನ್ನು ಪಡೆದು ಕೇಂದ್ರ ಸರ್ಕಾರದವರು ಈ ವರ್ಗದ ಜನರ ಅಭಿವೃದ್ಧಿಗೆ ಅನುಕೂಲಗಳನ್ನು ಕಲ್ಪಿಸುವುದಲ್ಲದೆ, ಸಂಸ್ಥಾನಗಳ ಸರ್ಕಾರಗಳು ಎಷ್ಟು ಹಣ ಒದಗಿಸಬೇಕು, ಕೇಂದ್ರ ಸರ್ಕಾರದವರು ಏನುಕೊಡಬೇಕು ಎಂಬ ವಿಚಾರದಲ್ಲಿಯೂ ವರದಿ ಕೊಡುವುದನ್ನು ನೇಮಿಸಿದ್ದಾರೆ. ಅವರು ಯಾವ ಯಾವ ಸಂಸ್ಥಾನಗಳಲ್ಲಿ ಏನೇನು ಸ್ಥಿತಿಗಳಿರುತ್ತವೆಂಬುದನ್ನು ತಿಳಿಯುವುಕೋಸ್ಕರವಾಗಿ ಈಗಾಗಲೆ ಪ್ರವಾಸ ಸಹ ಹೊರಟಿರುತ್ತಾರೆಂದು ಪತ್ರಿಕೆಗಳಲ್ಲಿ ಓದಿರುತ್ತೇನೆ, ಹಾಗೆ ಪ್ರವಾಸ ಹೊರಟಿರತಕ್ಕವರು ನಮ್ಮ ಮೈಸೂರು ಸಂಸ್ಥಾನಕ್ಕೂ ಕೂಡ ಖಂಡಿತವಾಗಿ ಬರಬಹುದು, ಹಾಗೆ ಅವರು ಬರುವಷ್ಟರೊಳಗೆ ನಾವು ಯಾವ ರೀತಿ ಮಾಡಬೇಕು, ಯಾವ ಯಾವ ಸ್ಕೀಮ್‌ಗಳನ್ನು ತಯಾರಿಸಿಟ್ಟುಕೊಂಡಿರಬೇಕು ಎಂಬುದನ್ನೆಲ್ಲಾ ಈಗಲೇ ಸಿದ್ಧಪಡಿಸಿಕೊಳ್ಳಬೇಕು. ಹಾಗೆ ಅವರು ಬಂದಕೂಡಲೇ ಇಲ್ಲಿಯು ನಿಮ್ಮ ತರಗತಿಗಳವರ ಪ್ರಾಬ್ಲೆಂಸ್ ಏನೇ ನಿರುತ್ತವೆಂಬುದನ್ನು ಅವರಿಗೆ ತಿಳಿಯಪಡಿಸಿ ತಾತ್ಕಾಲಿಕ ಅನುಕೂಲ ಹೊಂದಲು ಈಗಾಗಲೆ ಆಂಧ್ರ ಮತ್ತು ಮದರಾಸ್ ಪ್ರಾಂತ್ಯಗಳಲ್ಲಿ ಒಂದೊಂದು ಕಮಿಷನನ್ನು ನಿರ್ಮಿಸಿರುವ ಹಾಗೆ ಇಲ್ಲಿಯೂ ಒಂದು ಅಂಥ ಕಮಿಷನನ್ನು ಸ್ಥಾಪಿಸಿ ಇಲ್ಲರುವ ಬ್ಯಾಕ್‌ವರ್ಡ್ ಕ್ಲಾಸಿನ ಮತ್ತು ಡಿಪ್ರಸ್ಡ್ ಕ್ಲಾಸಿನ ನಿಜವಾದ ಕಂಕ ಅಂಶಗಳನ್ನು ಶೋಧರಣೆ ಮಾಡುವುದು ಅಗತ್ಯವೆಂದು ನಾನು ತಿಳಿಸುತ್ತೇನೆ. ಈ ರೀತಿಯಾಗಿ ಮೆಟೀರಿಯಲ್ಸ್‌ಗಳನ್ನು ಇಲ್ಲಿ ಕಲೆಕ್ಟ್ ಮಾಡಿಟ್ಟುಕೊಂಡು ಅವರು ಇಲ್ಲಿ ಹೇಳಿರುವಂತೆ ಎಂದರೆ,—

"To suggest effective and workable ways and means."

(ಶ್ರೀ ಎಂ. ಮಾದಯ್ಯ)

ಎಲ್ಲವನ್ನೂ ಸಿದ್ಧಪಡಿಸಿಕೊಂಡಿರಬೇಕು. ಈ ಪಾಲಸಿ ಸಮಿತಿಗಳು ವಿಚಾರಗಳನ್ನು ಚರ್ಚೆ ಮಾಡಿ ಅವು ಬರತಕ್ಕಂಥ ೫ರ್ಮಾನಗಳಿಂದಲೇ ಆಗಲಿ ಅಥವಾ ಅವುಗಳು ಸರ್ಕಾರಕ್ಕೆ ಸಲ್ಲಿಸುವಂಥ ಶಿಫಾರ್ಸುಗಳಿಂದಲೇ ಆಗಲಿ ಅಷ್ಟೇನೂ ಉಪಯೋಗ ಇಲ್ಲಿಯವರೆಗೂ ಆಗಿರುವುದಿಲ್ಲ. ಆದರೆ ಈಗ ನೇಮಕ ಮಾಡಲ್ಪಡುವಂಥ ಸಮಿತಿಯು ತನ್ನ ಶಿಫಾರ್ಸುಗಳನ್ನು ಯಾವ ರೀತಿಯಲ್ಲಿ ಮತ್ತು ಹೇಗೆ ಮಾಡಿದರೆ ಅವುಗಳಿಗೆ ಒಂದು ಬೆಲೆಯು ಸರ್ಕಾರದಿಂದ ಬಂದೇ ತೀರಬೇಕೋ ಅಂಥ ಒಂದು effective ಆವರೀತಿಯಲ್ಲಿ ಸಲಹೆಗಳನ್ನು ನೀಡುವಂತಿರಬೇಕು. ಈ ಸಮಿತಿಯವರು ಮಾಡುವಂಥ ಪ್ರತಿಯೊಂದು ಸಲಹೆಗಳೂ ಕಾರ್ಯ ಸಾಧನೆಗೆ ಅನುಕೂಲವಾಗುವಂತೆ workable ಆಗಿರಬೇಕು. ಮತ್ತು ಸರ್ಕಾರದವರ ಮೇಲೆ ಒಂದು ಒತ್ತಾಯವನ್ನು ಹಾಕಿ may or may not ಎಂದು ಹೇಳುವುದಕ್ಕೆ ಅವಕಾಶ ವಿಲ್ಲದಂತೆ ಸರ್ಕಾರದವರ ಮೇಲೆ ಒಂದು ಬೈಂಡಿಂಗ್ ಆಗಿರುವಂತೆಯೂ, ಹಾಗೆ ಮಾಡಲ್ಪಡುವ ಶಿಫಾರ್ಸುಗಳಿಗೆ ಒಂದು ಬೆಲೆ ಸಿಕ್ಕುವಂತೆಯೂ ಇರಬೇಕು. ಈಗ ಮೈಸೂರು ಸಂಸ್ಥಾನದಲ್ಲಿ ಅನೇಕಸಂಸ್ಥೆಗಳಿಗೆ ಒಂದು ಗ್ರಾಂಟ್ ಕೊಡುತ್ತಿರುವಂತೆ ಈ ನಿಮ್ನ ಪಂಗಡಗಳವರ ಅಭಿವೃದ್ಧಿಗೂ ಒಂದು ಗ್ರಾಂಟನ್ನು ಕೊಡಲಾಗುತ್ತಿದೆಯೆಂದು ತಾವು ಲೋಕಾಭಿರಾಮವಾಗಿ, ಅದರಿಂದಲೇ ಎಲ್ಲವೂ ಅನುಕೂಲವಾಗಿ ಹೋಗಲು ಸಾಧ್ಯವಿದೆಯೆಂದು ಹೇಳಿದರೆ ಅದು ಸಾಲದೆಂದು ನಾನು ಹೇಳಬೇಕಾಗಿದೆ. ಈ ದಿವಸ ಸರ್ಕಾರದವರು ಈ ನಿಮ್ನ ತರಗತಿಯವರ ಅಭಿವೃದ್ಧಿಗಾಗಿ ಏನೊಂದು ಗ್ರಾಂಟನ್ನು ಈ ದಿವಸ ಉದಾರವಾಗಿ ಕೊಟ್ಟಿದ್ದಾರೋ ಅದಕ್ಕಾಗಿ ನಾವೆಲ್ಲರೂ ಅವರನ್ನು ಅಭಿನಂದಿಸಬೇಕಾಗಿದೆ. ಆದರೆ ಈ ಗ್ರಾಂಟೂ ಸಹ ಯಾವುದೋ ಓಬೀರಾಯನ ಕಾಲದಲ್ಲಿ ನಿಗದಿಮಾಡಲ್ಪಟ್ಟಂಥ ಒಂದು ಗ್ರಾಂಟು. ಈಗ ತಾವು ನಿಮ್ನ ಪಂಗಡದವರಿಗೆ ವಾಸದ ಮನೆಗಳನ್ನು ಕಟ್ಟಿಕೊಳ್ಳಲು ಗ್ರಾಂಟನ್ನು ಕೊಡುತ್ತಿದ್ದೀರಿ. ಆದರೆ ತಾವು ಇಷ್ಟೇ ಗ್ರಾಂಟನ್ನು ಕೊಡುತ್ತಾ ಹೋದರೆ ಅವರು ಎಷ್ಟು ವರ್ಷಗಳಲ್ಲಿ ಈ ಕೊರತೆಯನ್ನು ನಿವಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಹೀಗೆ ಅವರ ಒಂದು ಅಭಿವೃದ್ಧಿ ಎಷ್ಟು ಕಾಲದೊಳಗೆ ಒಂದು ನಿರೀಕ್ಷಿಸಿದ ಮಟ್ಟವನ್ನು ತಲಪಬೇಕೋ ಅಷ್ಟನ್ನು ಮುಟ್ಟುವಂತೆ ಮಾಡಲು ತಾವು ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸಿ ಇಲ್ಲಿಯವರೆಗೆ ನಮ್ಮ ಮುಂದೆ ಇಟ್ಟಿರುವುದಿಲ್ಲ. ನಾನು ಈ ಹಿಂದಯೇ, ಎಂದರೆ, 1943 ರಲ್ಲೇ ಈ ನಿಮ್ನ ತರಗತಿಯವರ ಯೋಜನೆಗಾಗಿ ಸರ್ಕಾರದವರು ಯಾವ ಒಂದು ಯೋಜಯನ್ನೂ ಕೈಕೊಂಡಿರುವುದಿಲ್ಲವೆಂದು ಒತ್ತಾಯ ಪಡಿಸಿದಕಾರಣದ ಮೇರೆಗೆ, ಸರ್ಕಾರದವರು ಈ ಡಿಪ್ರೆಸ್ಡ್ ಕ್ಲಾಸಿನವರ ಅಭಿವೃದ್ಧಿಗೆ ವಿವಿಧ ಮಾರ್ಗಗಳನ್ನು ಸೂಚಿಸುವಂತೆ ಒಂದು ಸಮಿತಿಯನ್ನು ನೇಮಕಮಾಡಿ ಈ Housing Scheme ಎಂಬ ಯೋಜನೆಯು ತನ್ನ್ಮ ಲಕ್ಷಕ್ಕೆ ಬರುವಂತೆ ಮಾಡಿದರು. ಆದರೆ ಈಗ ತಾವು ಈ ನೀತಿಯ ಪ್ರಕಾರ ಜಿಲ್ಲಾವಾರ್ ಇದನ್ನು ಹಂಚುವಂತೆ ಮಾಡಿದ್ದೀರಿ. ಈ ಒಂದು ಯೋಜನೆ ಏನಾಮತ್ತೆ ಯಾವುದನ್ನಾದರೂ ಎಂದರೆ ಇಂಥ ಇನ್ನೊಂದು ಯೋಜನೆಯನ್ನಾದರೂ ಸರ್ಕಾರ ಇಲ್ಲಿಯತನಕಮಾಡಿರುತ್ತದೆಯೇ ಹೇಳಲಿ ಎಂದು ನಾನು ಕೇಳತ್ತೇನೆ. ಹೀಗೆ ಆ ಒಂದು Housing Scheme ಏನಾ ಮತ್ತೆ ಯಾವುದನ್ನೂ ಸರ್ಕಾರದವರು ಇಲ್ಲಿಯತನಕ ಮಾಡಿಲ್ಲವೆಂದು ತಿಳಿಸುತ್ತೇನೆ.

ಇನ್ನೂ ಅವರಿಗೆ ಜಮೀನು ಕೊಡತಕ್ಕ ಬಗ್ಗೆ ಮತ್ತು ಆರ್ಥಿಕಾಭಿವೃದ್ಧಿಯ ಬಗ್ಗೆ ಮತ್ತು ಅವರ ವಿದ್ಯಾಪ್ರಗತಿಗಾಗಿ ಏನೇನು ಅನುಕೂಲತೆಗಳನ್ನು ಕಲ್ಪಿಸಬೇಕೋ ಅಂಥ ಅನುಕೂಲತೆಗಳನ್ನು ಕಲ್ಪಿಸತಕ್ಕ ಯೋಜನೆಗಳೊಂದನ್ನೂ ಇಲ್ಲಿಯತನಕ ಸರ್ಕಾರ ಹಾಕಿರುವುದಿಲ್ಲ. ಈ ವಿಚಾರಗಳೆಲ್ಲಾ ತಾವು ಒಂದು ಚಾರ್ಜೆಟ್ಟನ್ನು ಫಿಕ್ಸ್ ಮಾಡಬೇಕು. ಇದಕ್ಕಾಗಿಯೇ ಅಂಥ ಒಂದು ಸಮಿತಿ ಆಗತ್ಯವೆಂದು ನಾನು ಹೇಳುತ್ತಿರುವುದು. ಆದರೆ ಈ ವಿಚಾರಗಳೆಲ್ಲಾ ಎಷ್ಟೋ ಪಾಲಸಿ ಸಮಿತಿಗಳು ಇರುತ್ತವೆಯೆಂದು ತಾವು ಹೇಳಬಹುದು. ಆ ಪಾಲಸಿ ಸಮಿತಿಯನ್ನೆ ತಾವು ಕಮಿಷರ್ಷ ಎಂದೂ ಕರೆದರೂ ಕರೆಯಬಹುದು. ಹಾಗೆ ಕರೆಯುವುದರಿಂದ ಏನೂ ವಿರೋಧವಾಗಲಾರದು. ಆದರೆ ಈಗ ಬಂದಿರತಕ್ಕ ವಿಚಾರ ಅದಲ್ಲ. ಈಗ ಒಂದು ಪ್ರತ್ಯೇಕ ಸಮಿತಿಯನ್ನೇ ಇದಕ್ಕಾಗಿ ಏರ್ಪಾಡು ಮಾಡಬೇಕು. ಮುಂದಕ್ಕೆ ನಮಗೆ ಇಂಡಿಯಾ ಸರ್ಕಾರದವರಿಂದ ಬರಬೇಕಾದ ಕಕ್ಷಸೆಷ್ಟಗಳು ಮತ್ತು ಸಹಾಯಗಳು ಜಾಸ್ತಿ ಆಗಬೇಕಾಗಿರುವುದರಿಂದ ತಾವು ಈ ಒಂದು ಸಮಿತಿಯನ್ನು ನೇಮಿಸಲೇಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

(Sri S. Gopala Gowda rose.)

Mr. SPEAKER.—Would you like to hear Sri T. Mariappa and then speak?

Sri T. MARIAPPA (Mysore City North).—It is much better that the other members also speak.

ಶ್ರಿ ಎಸ್. ಗೋಪಾಲಗೌಡ (ಸಾಗರ ಹೊಸನಗರ) ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕ ಈ ನಿರ್ಣಯವನ್ನು ಸಮರ್ಥಿಸುತ್ತ ನಾನು ನಿಮ್ನ ತರಗತಿಗಳವರ ಅಭಿವೃದ್ಧಿಯ ಬಗ್ಗೆ ಕೆಲವು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ನಮ್ಮ ಸಮಾಜದಲ್ಲಿ ಈ ನಿಮ್ನ ಪಂಗಡಗಳವರು ದಲಿತರು ಮತ್ತು ದೀನರೂ ಕೂಡ ಆಗಿದ್ದಾರೆ. ಇದನ್ನು ಮನಗಂಡು ಭಾರತ ರಾಜ್ಯಾಂಗದಲ್ಲಿ ಇನ್ನು 10 ವರ್ಷಗಳ ತನಕ ಅವರಿಗೆ ವಿಶೇಷ ಸೌಲಭ್ಯಗಳನ್ನೂ ಮತ್ತು ಅವಕಾಶಗಳನ್ನೂ ಕಲ್ಪಿಸಿಕೊಟ್ಟು ಅವರ ಅಭಿವೃದ್ಧಿಯನ್ನು ಇತರ ಜನಾಂಗಗಳ ಮಟ್ಟಕ್ಕೆ ತರಬೇಕೆಂದು ಉದ್ದೇಶಿಸಲಾಗಿದೆ. ಈ ನಿಮ್ನ ಪಂಗಡದವರಲ್ಲಿ ಇಲ್ಲಿಯತನಕ ಬಹುಮಂದಿ ಕೃಷಿಯಿಂದ ಜೀವನ ಮಾಡುತ್ತಿದ್ದರೂ ಅವರಿಗೆ ಸ್ವಂತ ವ್ಯವಸಾಯಕ್ಕೆ ಭೂಮಿಯಿಲ್ಲ. ಆದುದರಿಂದ ಅವರಲ್ಲಿರತಕ್ಕವರೆಲ್ಲರೂ ಪೂರಾ Landless Agricultural Labourers ಆಗಿದ್ದಾರೆ. ಆದುದರಿಂದ ಅವರುತಮ್ಮ ದೇ ಆಂಥ ಒಂದು ಕಾಲ ಕಸಬನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಮತ್ತೆ ಕೆಲವರು ಇತರ ಸಣ್ಣ ಪುಟ್ಟ ಬೇರೆ ಬೇರೆ ವ್ಯಾಪ್ತಿಯ ರತಕ್ಕ ವೃತ್ತಿಗಳನ್ನು ಅವಲಂಬಿಸಿಕೊಂಡು ಬರುತ್ತಿದ್ದಾರೆ. ಹಿಂದೂ ಸಮಾಜವನ್ನು ನೋಡಿದರೆ ಕುಷ್ಠರೋಗದಿಂದ ಕೈಕಾಲುಗಳು ಕೊಳೆತು ಹೋದ ಒಬ್ಬ ಮನುಷ್ಯನಿದ್ದಂತೆ ಕಾಣುತ್ತಿದೆ. ಹೀಗೆ ಈ ಜನಾಂಗದ ಶತ ಶತಮಾನಗಳಿಂದಲೂ ತುಳಿಯಲ್ಪಟ್ಟು ಕೆಳಕ್ಕೆ ಒತ್ತಲ್ಪಟ್ಟು, ಕಡೆಗೆ ಈ ಜನಾಂಗವನ್ನೆ ಯಾರೂ ಮುಟ್ಟದಂತೆ ಮಾಡಿ ಹಾಕಿದ್ದರು. ಹೀಗೆ ಮುಟ್ಟಲೂ ಬಾರದೆಂದು ಮಾಡಿರತಕ್ಕಂಥ ಜನಾಂಗಗಳ ಸಂಖ್ಯೆ ಸಾವಿರಗಟ್ಟಲೆ ಅಪಾರವಾಗಿದೆ. ನಮ್ಮ ದೇಶದ ಈ ಪ್ರಜಾ ಪ್ರಭುತ್ವದ ಯಶಸ್ಸು ಇವರ ಮೇಲೆಯೇ ಅವಲಂಬಿಸಿರುತ್ತದೆಂದು ಹೇಳಿದರೂ ಹೇಳಬಹುದು. ಹೀಗೆ

ನೂರಾರು ವರ್ಷಗಳಿಂದ ಈ ಒಂದು ಜನಾಂಗ ಇತರ ಜನಾಂಗಗಳವರ ಅಭಿವೃದ್ಧಿಗೆ ಕೊಟ್ಟರತಕ್ಕಂಥ ಸಾಮಾನ್ಯವನ್ನು ತೀರಿಸುವುದಕ್ಕೆ ನಾವೆಲ್ಲರೂ ತೆರಬೇಕಾದ ಋಣ ಬಹಳವಾಗಿದೆಯೆಂದು ಹೇಳುತ್ತೇನೆ. ತಾವು ಯಾವ ಒಂದು ಪಟ್ಟಣಕ್ಕೆ ಹೋಗಲಿ ಅಥವಾ ಒಂದು ಊರಿಗೇ ಹೋಗಲಿ ಅಲ್ಲಿ ಒಂದು ಹೊಲಗೇರಿ ಇದ್ದೇ ಇರುತ್ತದೆ. ಇದು ನಿಮ್ಮ ಹಿಂದೂ ಸಂಸ್ಕೃತಿಗೆ ಒಂದು ಕಳಂಕ ಪ್ರಾಯವಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—"ನಿಮ್ಮ ಹಿಂದೂ ಸಂಸ್ಕೃತಿಗೆ" ಎಂದು ಹೇಳುತ್ತಿದ್ದೀರಿ. ಹಾಗಾದರೆ ತಾವೇನು ಹಿಂದುಗಳಲ್ಲವೋ?

ಶ್ರೀ ಎಸ್. ಗೋಪಾಲಗೌಡ.—ನಾನು ಹಾಗೆ ಹೇಳಿದ್ದು ತಪ್ಪಿರಬಹುದು. ನಾನು "ನಮ್ಮ ಹಿಂದೂ ಸಂಸ್ಕೃತಿಗೆ" ಎಂದೇ ಹೇಳಬೇಕಾಗಿತ್ತು. ನಾನು ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಜನಾಂಗವನ್ನು ಇತರ ವರ್ಣ ಹಿಂದುಗಳು ಎಲ್ಲಿಯತನಕ ಮೆಲ್ಮಟ್ಟಕ್ಕೆ ಎತ್ತುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶ ಮುಂದುವರಿಯಲು ಖಂಡಿತ ಸಾಧ್ಯವಿಲ್ಲವೆಂದು ನಾನು ತಿಳಿಸುತ್ತೇನೆ. ಅವರ ಸಂಖ್ಯೆ ಎಷ್ಟು ಹೆಚ್ಚಾಗಿದೆಯೋ ಅವರ ಕ್ಷೇತ್ರವೂ ಕೂಡ ಅಷ್ಟೇ ವಿಶಾಲವಾಗಿದೆ. ಆದರೆ ನಾನು ಹೇಳಿರತಕ್ಕ ಒಂದು ವಿಚಾರವನ್ನು ಎಂದರೆ, ಈ ಜನಾಂಗದಲ್ಲರತಕ್ಕವರೆಲ್ಲರೂ "ದೀನರು, ದಲಿತರು" ಎಂದು ಹೇಳಿರುವುದರಿಂದ ಕೆಲವರು, ಅಂಥ ದೀನರೂ ದಲಿತರೂ ಆಗಿರತಕ್ಕವರು ಬೇರೆ ಜನಾಂಗಗಳಲ್ಲರುವುದಿಲ್ಲವೇ, ಎಂದು ಕೇಳಿದರೂ ಕೇಳಬಹುದು. ನಮ್ಮ ದೇಶದಲ್ಲಿ ಈ ದಿವಸ ಈ ಆರ್ಥಿಕ ಮತ್ತು ಸಾಮಾಜಿಕ ಎರಡೂ ಬಹಳ ಜಿಗುಟಾದ ಸಮಸ್ಯೆಗಳಾಗಿವೆ, ಈ ದಿವಸ ಇಂಗ್ಲೆಂಡ್ ಅಥವಾ ಇತರ ಯಾವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೆ ಆಗಲಿ ಅವರು ತಮ್ಮ ಜನಗಳ ಆರ್ಥಿಕ ಸಮಸ್ಯೆಯೊಂದನ್ನು ಮೊದಲು ಬಿಡಿಸಿ ಬಿಟ್ಟರೆ, ಅನಂತರ ಇನ್ನುಳಿಯತಕ್ಕ ಅವಶ್ಯಕವಾದ ಇತರ ಸಮಸ್ಯೆಗಳೆಲ್ಲವೂ ತಮ್ಮಷ್ಟಕ್ಕೆ ತಾವೆ ಸರಿಹೋಗುತ್ತವೆಂದು ತಿಳಿಬಹುದು. ಅದರ ಪ್ರಕಾರ ನೋಡಿದರೆ, ಇತರ ಎಲ್ಲಾ ಸಮಸ್ಯೆಗಳಿಗೂ ಈ ಆರ್ಥಿಕ ಸಮಸ್ಯೆಯೇ ಮೂಲಾಧಾರವೆಂದು ನನಗೆ ಹೊಳೆಯುತ್ತದೆ. ಆದರೆ ಈ ಸಾಮಾಜಿಕ ಸಮಸ್ಯೆಯೂ ಅಷ್ಟೇ ಮೂಲ ಭೂತವಾಗಿದೆ. ಅದುದರಿಂದ ಈ ಮೂಲ ತೊಡಕುಗಳನ್ನೆಲ್ಲಾ ಬಿಡಿಸ ಬೇಕಾಗಿದ್ದರೆ ಭಾರತ ಸಂವಿಧಾನದಲ್ಲಿ ಅವರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿ ಕೊಟ್ಟು, ಅವರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳಾಗಿ ಬರುವುದಕ್ಕೆ ಅವಕಾಶವಿರುವ ಹಾಗೆ ಮಾಡಿದ ಮಾತ್ರ ಅವರಿಗೆ ಈ ಸಮಸ್ಯೆಗಳನ್ನು ಬಿಡಿಸಲು ಎಂದಿಗೂ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರವಾಗಿ ನಾವೂ ಇನ್ನೂ ಹೆಚ್ಚಿಗೆ ತೀವ್ರ ಗಮನವನ್ನು ಕೊಟ್ಟು, ದೇಶದ ಮಹಾ ಜನರೂ ಮತ್ತು ಇಂಥ ವಿಧಾನ ಸಭೆಗಳವರೂ ಕಾನೂನು ಪ್ರಕಾರ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವುಗಳೆಲ್ಲವನ್ನೂ ಕೊಡುವಂತೆ ಮಾಡತಕ್ಕದ್ದು ಎಲ್ಲ ಸರ್ಕಾರಗಳ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಸ್ವಲ್ಪ ಹೆಚ್ಚು ಕಡಿಮೆ ಈ ಜನಾಂಗದವರಂತೆಯೇ ಇನ್ನೂ ತೊಂದರೆಗೊಳಗಾಗಿರತಕ್ಕ ಮತ್ತೊಂದು ಜನಾಂಗವಿದೆ. ಮಲೆನಾಡು ಪ್ರದೇಶದಲ್ಲಿ ಅವರನ್ನು "ದೀವರು" ಎಂದು ಕರೆಯುತ್ತಿದ್ದಾರೆ. ಈ ಜನಾಂಗದವರೂ ಕೂಡ ಈ ಷೆಡ್ಯೂಲ್ಡ್ ಪಂಗಡಗಳವರಿಗೆ ಒದಗಿಸುತ್ತಿರುವಂಥ ಎಲ್ಲ ಸೌಲಭ್ಯಗಳನ್ನೂ ತಮಗೂ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ ಈ ಸೌಲಭ್ಯಗಳನ್ನು ಕೇಳುವ ಅವರೂ ಸಹ ಅವರ ಗುಂಪಿಗೆ ಸೇರಿಕೊಳ್ಳಲಿ ಎಂದು ಹೇಳಬಹುದು. ಆದರೆ ಹಾಗೆ ಕೇಳತಕ್ಕದ್ದು ಅಷ್ಟು ಹಿತಕರವಾಗಿರುತ್ತದೆಂದು ಕಾಣುವುದಿಲ್ಲ. ಆ ಜನಾಂಗದಲ್ಲಿಯೂ ಕೂಡ ಹೆಚ್ಚು ಜನ ಬಡವರಿದ್ದಾರೆ. ಅವರಿಗೆ ಸಾಕಷ್ಟು ಜಮೀನಿರುವುದಿಲ್ಲ; ಉದ್ಯೋಗಗಳು ಬೇಕಾಗಿವೆ. ಆದರೆ ಅವರು ಹೀಗೆ ರಾಟಾವನ್ನು ಮಾತ್ರ ಇನ್ನೂ ಮಾಡಿರುವುದಿಲ್ಲ. ಅವರು ಈ ಸೌಲಭ್ಯಗಳಿಗಾಗಿ ಹೋರಾಟ ಮಾಡಿದರೆ ಸಾಕು ಅವರಿಗೂ ಈ ಸೌಲಭ್ಯಗಳು ಬಂದೇ ಬರುತ್ತವೆ. ಅವರೂ ಈ ನಿಮ್ಮ ಪಂಗಡದವರಲ್ಲಿರುವವರ ಹಾಗೆ ದಲಿತರೂ, ದೀನರೂ ಆಗಿದ್ದಾರೆ ಎಲ್ಲರಿಗೂ ಗೌರವ ಸಲ್ಲಿಸಬೇಕಾದ್ದು ನ್ಯಾಯವಾಗಿದೆ. ಆದರೆ ಇದು ಎಲ್ಲರಿಗೂ ಈ ದಿವಸ ಸಲ್ಲುತ್ತಿಲ್ಲ. ಯಾವುದೋ ಕಾಲದ ಓಬೀರಾಯನ ನಡವಳಿಕೆಗಳೇ ಇನ್ನೂ ಮುಂದುವರಿದುಕೊಂಡು ಬರುತ್ತಿವೆ. ಮಲೆನಾಡಿನಲ್ಲಿ ಇವರನ್ನೇ ಹರಿಜನರಂತೆ ಕಾಣಲಾಗುತ್ತಿದೆ. ಆದರೆ ಅವರಿಗೆ ಆ ಕೇಸಿನ ಗಳನ್ನೆಲ್ಲಾ ಮಾಡಿಸಿಕೊಂಡನಂತರ ಏನು ಗೌರವಗಳನ್ನು ಸಲ್ಲಿಸಬೇಕಾಗಿತ್ತೋ ಆ ಗೌರವಗಳನ್ನು ಮಾತ್ರ ಸಲ್ಲಿಸುತ್ತಿಲ್ಲ.

4. P.M.

ಇಪ್ಪತ್ತು ವರ್ಷಗಳ ಮೇಲೆ ಕೂಡ ಏನಾದರೂ ಜಗಳ ಮಾಡಿಕೊಂಡು ಅವರು ಅವನಿಗೆ ಸಲ್ಲಬೇಕಾದ ಸಂಬಳ ಕೊಡದೆಇದ್ದರೂ ಹಾಗೆಯೇ ಅವನು ಏನಾದರೂ ಪರಾರಿಯಾದರೂ ಅಂಥವನನ್ನು ಮತ್ತೆ ಹಿಡಿಸಿ ಕೈಕಾಲು ಕಟ್ಟಿಹಾಕಿ ತಂದು ದಂಡಿಸುತ್ತಾರೆ. ಇದು ಜೀತದ ಪದ್ಧತಿ! ಅವನಿಗೆ ಮದುವೆಮಾಡಿದರೆ, ಅವನು, ಅವನ ಹೆಂಡತಿ ಅವನ ಮಕ್ಕಳು ಎಲ್ಲರೂ ಅವರ ಸ್ವತ್ತು! ಚರಸ್ವತ್ತು ಇದ್ದಹಾಗೆ. ಇಂಥಾದ್ದು ಸಮಾಜದಲ್ಲಿ ಇವೊತ್ತಿಗೂ ಇದೆಯೆಂದು ಹೇಳಿದರೆ ನಾವು ಪ್ರಜಾ ಪ್ರಭುತ್ವಯುಗದಲ್ಲಿದ್ದೇವೆಯೇ, ಅಥವಾ ಪ್ರಜಾಪ್ರಭುತ್ವವನ್ನು ಆಚರಿಸುತ್ತಿದ್ದೇವೆಯೇ ಎಂದು ಹೇಳಲು ಶಕ್ಯ ಸಾಧ್ಯವಿಲ್ಲ. ಹೆಚ್ಚಾಗಿ, ಈ ಸಮಸ್ಯೆಗಳು ಪಟ್ಟಣಗಳಲ್ಲಿ ಕಾಣದೆ ಇರಬಹುದು. ಹಳ್ಳಿಗಳಲ್ಲಿ ಹೋಗಿ ನೋಡಬೇಕು. ಹಳ್ಳಿಗಳಲ್ಲಿ ಈಗಲೂಕೂಡ ದೇವಸ್ಥಾನಗಳಿಗೆ ಹರಿಜನರು ಹೋಗುವುದಾಗಲಿ, ಹರಿಜನರು ಸವರ್ಣಹಿಂದುಗಳ ಬಾವಿಗಳನ್ನು ಉಪಯೋಗಿಸುವುದಾಗಲಿ, ಅವರನ್ನು ಸಮಭಾವದಿಂದ ಕಾಣುವುದಾಗಲಿ ಎಲ್ಲೂ ಇಲ್ಲ. ನಿಮ್ಮ ಕಾನೂನಿನ ಪುಸ್ತಕದ ಕಡತದಲ್ಲಿದೆಯೇ ಹೊರತು ಕಾರ್ಯತಃ ಬಂದಿಲ್ಲ. ಅವು ಕಾರ್ಯತಃ ಬರುವುದಕ್ಕೂ ಅನೇಕರು ಅಡ್ಡಿಪಡಿಸುತ್ತಾರೆ. ಯಾರಿಗೆ ಈಗ ಅವರಿಂದ ಹೆಚ್ಚು ಉಪಯೋಗವಾಗುತ್ತಿದೆಯೋ, ಯಾರು ಅವರನ್ನು ಸಂಬಳ ಸಾರಿಗೆ ಕೊಡದೆ ಯಾವ ಹೀನ ಕೆಲಸಕ್ಕಾದರೂ ಹಚ್ಚಿ ದುಡಿಸುತ್ತಿದ್ದಾರೆಯೋ ಅಂಥ interested ಜನರುಗಳು ಸಮಾಜದಲ್ಲಿ ಪ್ರಗತಿಯಾಗಬೇಕೆಂದು ಪ್ರಯತ್ನಪಟ್ಟರೂ ಅದನ್ನು ಮೊಟಕು ಮಾಡುತ್ತಾರೆ, ಅವರನ್ನು ತಡೆಯುತ್ತಾರೆ. ಆದ್ದರಿಂದ ಇದನ್ನು ಮನಗಂಡು ಹೆಚ್ಚುಹೆಚ್ಚಾಗಿ ನಾವು ಈಬಗ್ಗೆ ಪ್ರಯತ್ನಮಾಡಿ ಅವರನ್ನು ಮೇಲುಮಟ್ಟಕ್ಕೆ ತರುವುದಕ್ಕೆ ಪ್ರಯತ್ನಮಾಡಬೇಕು. ಈ ಸಂಬಂಧದಲ್ಲಿ ಒಂದು ಸಮಿತಿಯನ್ನು ನಿರ್ಧಾರ ಮಾಡಿ ಅವರು ಎಲ್ಲೆಲ್ಲಿ ಉದ್ಯೋಗದಲ್ಲಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕು. ಈ ಪಂಗಡಕ್ಕೆ ಸೇರಿದಂತೆ ಲಂಬಾಣಿಗರೆಂದು ಜನ ಇದ್ದಾರೆ. ಅವರ ಊರನ್ನು ತಾಂಡಾ ಎಂದು ಹೇಳುತ್ತಾರೆ. ತಾಂಡಾಗಳೆಂದರೆ ಊರಿನ ಹೊರಗೆ ಇದ್ದಹಾಗೆ. ಅವರಿಗೆ ಯಾವ ಸೌಲಭ್ಯಗಳನ್ನೂ ಇದುವರೆಗೂ ಕಲ್ಪಿಸಿಕೊಟ್ಟಿಲ್ಲ. ಅವರ ವೃತ್ತಿ

(ಶ್ರೀ ಎಸ್. ಗೋಪಾಲಗೌಡ.)

ಕಾಡಿಗೆ ಹೋಗಿ ಕಟ್ಟಿಗೆತಂದು ಮಾರುವುದು, ಜಮಾನು ವ್ಯವಸಾಯ ಮಾಡುವುದು. ಹಾಗೂ ಹೀಗೂ ನಾನಾ ತರಹದ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಇಷ್ಟೊಂದು ಬಹು ಸಂಖ್ಯಾತ ಜನಾಂಗ ಮೂಲೆಗುಂಪಾಗಿದ್ದು ಅವರೂ ನಮ್ಮ ಜನಾಂಗದಲ್ಲಿ ಸೇರಿ ನಾವು ಮಾಡತಕ್ಕ ಕೆಲಸಕಾರ್ಯಗಳಲ್ಲಿ ನಮ್ಮ ಯೋಜನೆಗಳಲ್ಲಿ ಭಾಗವಹಿಸದೆ ಹೋದರೆ ದೇಶ ಏಳಿಗೆಯಾಗುವುದಿಲ್ಲ. ಅವರು ಸಮಾಜದಲ್ಲಿ drag ಆಗಿ ಹಿಂದಕ್ಕೆ ಎಳೆಯತಕ್ಕ ಶಕ್ತಿಯಾಗಿ ಉಳಿಯುತ್ತಾರೆ. ಆದ್ದರಿಂದ ಈ ಸಮಸ್ಯೆಯನ್ನು ಬಿಡಿಸಿ ಯಾವ ಪ್ರಗತಿಯೂ ಸಾಗುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ದೇಶದಲ್ಲಿ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಎಷ್ಟು ಪ್ರಯತ್ನವನ್ನು ಮಾಡಬೇಕೋ ಅಷ್ಟು ಪ್ರಯತ್ನವನ್ನು ಬಹಳ ಮುಖ್ಯವಾಗಿ ಮೊದಲುಮಾಡಬೇಕೆಂಬುದು ನನ್ನ ಒತ್ತಾಯಪೂರ್ವಕವಾದ ವಿನಂತಿ. ಇಲ್ಲಿ ಹೆಚ್ಚಾಗಿ ಈ ಸಮಸ್ಯೆಯಬಗ್ಗೆ ಮಾತನಾಡದಿರುವುದಕ್ಕೆ ಕಾರಣವೇನೆಂದರೆ, ಅವರ ಪ್ರತಿನಿಧಿಗಳು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರೇ ಇದನ್ನು ಈ ಸಭೆಯಮುಂದೆ ಅನೇಕಸಾರಿ ಇಷ್ಟು ಚರ್ಚೆಮಾಡಿದ್ದಾರೆ ಆದ್ದರಿಂದ ನಾನು ನೇರವಾಗಿ ಈ ಸಮಸ್ಯೆಯ ಬಗ್ಗೆ ಪ್ರಾತಿನಾಡಲಕ್ಕೆ ಅಷ್ಟಾಗಿ ಇಷ್ಟಪಟ್ಟಿರಲಿಲ್ಲ. ಈಗ ಮೈಸೂರು ಸಂಸ್ಥಾನದಲ್ಲಿ ಅವರಬಗ್ಗೆ ಒಂದು ಸರ್ವೆ ನಡೆಸಿ, ಅವರು ಯಾವ ಯಾವ ಉದ್ಯೋಗಗಳಲ್ಲಿದ್ದಾರೆ, ಅವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಏನು ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಮತ್ತು ಹಾಲಿ ಇರೋಕ್ತ ಕಾನೂನುರೀತ್ಯಾ ಅವರಿಗಿರುವ ಸೌಲಭ್ಯಗಳನ್ನು ಅವರಿಗೆ ಮನದಟ್ಟುಮಾಡಿಕೊಡಬೇಕು. ಎಷ್ಟೋ ಜನರಿಗೆ ಅವುಗಳಿರುವುದೇ ಗೊತ್ತಿಲ್ಲ ಹೆಚ್ಚುಹೆಚ್ಚಾಗಿ ಪ್ರಚಾರದ ಮುಖಾಂತರ ಅವು ಬರಬೇಕು. ಸರ್ಕಾರಿ ಸ್ಪೆಷಲ್ ಆಫೀಸರೆಂಬುವರು ಇದ್ದಾರೆ. ಆದರೆ ಅವರು, ಯಾರಾದರೂ ಜನರು ಬಂದು ಅವರನ್ನು ಕರೆದುಕೊಂಡು ಹೋದರೆ ಈಕೆಲಸ ಮಾಡುತ್ತಾರೆಯೇ ವಿನಾ ತಾವಾಗಿಯೇ initiative ತೆಗೆದುಕೊಂಡು ಆ ಜನರ ಕಷ್ಟಗಳೇನಿವೆಯೆಂದು ತಿಳಿದುಕೊಂಡು ನೇರವಾಗಿ ಈ ಸೌಲಭ್ಯಗಳನ್ನು ಅವರಿಗೆ ಒದಗಿಸಿಕೊಡುತ್ತಿಲ್ಲ. ಆದ್ದರಿಂದ ಈ ಎಲ್ಲಾ ದೃಷ್ಟಿಯಿಂದ ಇಂಥ ಒಂದು ಕಮಿಷನ್ನನ್ನು ಏರ್ಪಾಡುಮಾಡಿ ಒಂದು ಸರ್ವೆ ಮಾಡುವುದರ ಮುಖಾಂತರ ಸರ್ಕಾರದವರು ಅವರಿಗೆ ಅತ್ಯಗತ್ಯವಾದ ಸೌಲಭ್ಯಗಳನ್ನು ಕೊಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

*Sri T. MARIAPPA.—Sir, I am grateful to you for having given me an opportunity to speak on this resolution. I am entirely in sympathy with the principle underlying this resolution. It is true that a very heavy responsibility has devolved upon both the Union and the States after the attainment of freedom. The framers of the Constitution have taken all aspects of the situation existing in this country into consideration and have provided certain safeguards for the uplift of both the scheduled castes and the backward classes. Incidentally, Sir, I will be failing in my duty if I do not make a very handsome reference to the unique work done by Sri Punjabrao Deshmukh in this behalf. The original provision was made for working out suitable schemes for the amelioration of the depressed classes. Dr. Punjabrao Deshmukh who has devoted considerable part of his life for the uplift of backward classes, raised this question at the first instance in the Constituent Assembly. It must be said to his credit that he was able to win over a large portion of that Constituent Assembly to his way of thinking. That subject was no doubt very unpalatable at that time. Many people dubbed him as being a communalist. In spite of that, he stood up and made a very fervent appeal to the House to include certain safeguards in the Constitution for the upliftment of the backward classes also. It is mainly due to his efforts and to the efforts of his colleagues that this provision was included in the Constitution as Article 340. I have already said that I am in full sympathy with the principle and aspiration of the resolution put forward by my friend Sri Puttaswamy. It is also true that the Union Government have taken certain precautions, certain steps to safeguard the interests of the scheduled castes and scheduled tribes. Article 338 of the Constitution reads as follows :

> "There shall be a Special Officer of the Scheduled Castes and Scheduled Tribes to be appointed by the President of the Union Government."

He has submitted a very detailed report to the Union Government and they have passed certain orders thereon. Clause (2) of Art. 338 says :

> "It shall be the duty of the Special Officer to investigate all matters relating to the safeguards provided for the Scheduled Castes and Scheduled Tribes under this Constitution and

report to the President upon the working of those safeguards at such intervals as the President may direct, and the President shall cause all such reports to be laid before each House of Parliament."

Incidentally, I may also refer to clause (3) of Article 338. It runs as follows :

"In this article, references to the Scheduled Castes and Scheduled Tribes shall be construed as including references to such other backward classes as the President may, on receipt of the report of a Commission appointed under clause (1) of Article 340, by order specify and also to the Anglo-Indian Community."

In the context of this provision it was necessary for the Union Government also to appoint a Commission to report on the condition of the backward classes including the scheduled castes and the scheduled tribes. The term 'backward classes' is a very wide term including both the scheduled castes and the scheduled tribes. Every Hon'ble Member belonging to the scheduled castes is on this Commission—one Sri Guiralkar who, I may be pardoned if I state, defeated Dr. Ambedkar in the last election. Therefore it is within the purview of this Commission to investigate the conditions, social and educational conditions of both the backward classes and scheduled castes and scheduled tribes. The Commission met last month, has drawn up tentatively the questionnaire, perhaps in the very near future the questionnaire is going to be widely circulated throughout the country. The future programme of this Commission, if I may say so, is to tour all the States of this great Union, investigate, hear deputations, collect all the satistics and the relevant information that may be made available both by the public and the State Governments and submit a report to the President of the Union.

Incidentally, I may mention that Mysore has stolen a march over other States in taking steps to ameliorate the conditions of both the backward classes and the scheduled castes. It is true in Mysore the problem of the scheduled tribes is not a big problem; it is a problem of both the backward classes and the scheduled castes. For over thirty years, the movement in Mysore took note of the appalling conditions of the backward classes and the scheduled castes. We may call it by whatever name, the movement was there. It was a question of fight between the haves and the have-nots. It is true in the first instance it took a turn for clamouring for jobs in Government service and other educational facilities. We must pardon those leaders for having taken such a narrow view. It is because it was all that was open to them in those days when the foreign Government was in power.

Sri L. SIDDAPPA (Channagiri).—Why pardon? All honour to them.

Sri T. MARIAPPA.—This question was directed to those Hon'ble Members who dubbed them as communalists. It is with pardonable pride that I make a memorable reference to the work of those who are responsible for this movement. Even though the scope was very narrow yet it achieved considerable results and the present advancement in the State of Mysore and in the neighbouring Province of Madras was due to the great efforts made by these people. In other parts of India, specially in the north, the condition of backward classes is indeed appalling. That is what the members of the Commission told me. There was no movement of this kind and the British Government which was in power till 1947 did not pay much heed to the advancement of the backward classes. It is not merely the educational or the political advancement of a class that is concerned, it is the social

(SRI T. MARIAPPA.)

advancement that is most essential. During the course of the discussion of the Commission when it first met, the Honourable Chairman of the Commission was remarking that the political freedom should mean eventually or in the immediate future social and economic freedom. The Governments of the Union and the States are no doubt working for economic freedom. It is no doubt a hard task and the Five-Year Plan is aimed at securing economic freedom in stages. Therefore, the other task which we have to accomplish is the achievement of social freedom. Sir, I have no belief in piecemeal reforms.

Piece-meal reforms when we are stagnating will not do when we see dynamic changes in the very social structure of our country. As Hon'ble Sri Gopal Gowda happened to remark, we want immediate changes to be brought about in the very structure of society. Inspite of the efforts that we made during the last five years, inspite of the law prevailing, we still see that people are not being admitted into temples and the social disabilities of the depressed classes have not been removed. It is true that the statute alone will not bring about the desired result. But human efforts of socialist friends like Sri Gopal Gowda go a long way in this direction. Therefore what we intend and try to achieve must be in the direction of a silent social revolution. I am not one who advocates very violent reform in changing the structure of society. Any violent reform may bring very undesirable results in its train. Therefore, Sir, a silent and effective social reform will bring about the results which perhaps is what Sri Puttaswamy wants in his resolution. It is to that end that the Union Government have appointed this Backward Classes Commission and the terms of reference are very wide. We are asked not only to investigate the existing conditions, but we have also been asked to investigate into the social conditions and the disabilities which have prevented the backward classes and scheduled castes and scheduled tribes from having their due place in society.

Due to historical process, certain customs have come into vogue. It is a process of history that has been responsible for keeping down certain communities of the Hindu religion and certain communities in the Muslim religion as well. My Hon'ble colleague in the Commission, one Mr. Ansari, told me that there are as many as 23 subsects of Muslims in Bihar and some of them are deemed to be untouchables, though Islam abolished all untouchability and wanted equality of man in its fold. Sir, India is an ancient land. We may call that India is a land of customs and in this diversity we often find very unsociable and undesirable social conditions prevailing. We must only complain against history. Probably historical accidents have given rise to these undesirable customs. When we have achieved political freedom, we can equally achieve social freedom in the very near future. But a great effort has to be made, a very sincere effort has to be made. We often meet with very stiff resistance when social changes have to be brought about. Our own kith and kin may come in the way. It has to be brought about both by persuasion and legislation.

Sir, the efforts of the Commission will perhaps bear fruit very early. The terms of reference include that the report should be submitted by January 1954. It shows exactly the anxiety of the Union Government to get the report early and implement it soon. Incidentally I may refer that the Special Officer appointed for the safeguarding of the backward classes has examined this question of scheduled castes and scheduled tribes. Some of the recommendations have already been implemented by the Union Government. They have given educational facilities; reservation of seats in certain services has been made and they are working for the

upliftment of the scheduled castes and scheduled tribes. I met the Special Officer recently when I had gone to Delhi. He is a very sympathetic officer, a man who has devoted all his time for the constructive activities as laid down by Gandhiji. He is a very unostentatious social worker and the scheduled castes and scheduled tribes have great deal of faith in him.

The results of the labours of this commission will undoubtedly give the methods and the manner of bringing about the upliftment of the backward classes and the scheduled castes. Perhaps my Hon'ble friend may say that the Backward Class Commission may report only on the conditions of the backward classes. It is not so. It is very wide; the terms include scheduled castes and scheduled tribes as well. Representatives of the scheduled castes and scheduled tribes, in this conection, will certainly take steps to safeguard the backward classes, scheduled castes and scheduled tribes.

Sir, if I may say so, we should not look at this question in a narrow way. It is a broader term and must include all castes, whether belonging to a higher school or higher caste, all those who are labouring under certain disabilities or certain disadvantages. Man naturally is a conservative animal. He tries to exploit the situation for his own advantage. Have we not seen that the advanced member of one community exploiting the weaker section of that community? The fundamental principle underlying the safeguards in the Constitution is that the weaker section, the vulnerable section, has to be protected against the onslaughts and exploitation of those who wield power or who are in a better position, or in an advantageous position. That is the principal responsibility for inserting this provision—Article 340 in the Constitution. Therefore, it may satisfy my friend when I say that the Commission has got a wider scope and greater facilities for enquiring into the conditions of backward classes and scheduled castes than ever before. Instead of doing the reform piecemeal, instead of taking steps with a view to ameliorate certain sections of the community, it is much better we go into the whole question once for all, take all the steps necessary to bring about a silent social revolution and remove all social disabilities that oppress human personality to whichever community or caste he may belong.

The material thing, the thing which we need is social revolution and this should be brought about in our society. It is true that the structure of society has to be changed if the desired results are to be obtained. That should not deter us—simply because the task is heavy. We have to face facts in the face and try to bring about the social changes. Along with the social changes, it is equally possible, Sir, to make provision for the economic upliftment of both the backward classes and the scheduled castes. Even though the terms of reference mention only the educational and social upliftment of these classes, incidentally the economic upliftment also comes into operation.

Therefore, we need not examine this question in a single State piecemeal. It is better if the larger question is left to the Backward Classes Commission. That will certainly go into the whole question and after the report is received by the Union Government, they will take certain steps and direct also the States to implement the scheme. That is the very wording of Article 340.

With these few words, I would earnestly request Sri Puttaswamy to leave the entire matter in the hands of the Backward Classes Commission and the Union Government and allow it to take appropriate steps for the uplift of those backward classes, scheduled castes and scheduled tribes.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ ನಾನು ಹೇಳಬೇಕಾದ ದನ್ನು ಶ್ರೀವರ್ಮಾ ಮರಿಯಪ್ಪನವರೇ ಹೇಳಿದ್ದಾರೆ. ಆದುದರಿಂದ ನಾನು ಇದಕ್ಕಿಂತಲೂ ಹೆಚ್ಚು ಹೇಳಬೇಕಾದುದಿಲ್ಲ. ಶ್ರೀವರ್ಮಾ ಮರಿಯಪ್ಪನವರ ಭಾಷಣವನ್ನು ಕೇಳಿದನಂತರ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri G. PUTTASWAMY.—I seek leave of the House to withdraw my resolution.

The resolution was, by leave withdrawn.

Mr. SPEAKER.—The next resolution stands in the name of Sri Prabhakar.

[MR. DEPUTY SPEAKER, (Sri R. Channigaramiah) in the Chair.]

Starting a Social Service Department by amalgamating the existing institutions.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ–ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಯವರೇ ನನ್ನ ನಿರ್ಣಯ ಈ ರೀತಿ ಇದೆ; ಅದನ್ನು ಮಂಡಿಸುತ್ತೇನೆ.

"This Assembly is of the opinion that a department of "Social Service" be started by amalgamating the works of such institutions as the Scout, the Red Cross, Civic and Social Progress Association, Seva Dal and Social Workers' Brotherhood, etc., in the State so as to save Government money and work out more suitable plans."

ಈರೀತಿ ಇದಕ್ಕೆ ನನ್ನ ಈ ನಿರ್ಣಯದ ಸಂಬಂಧವಾಗಿ ನಿರ್ದಿಷ್ಟವಾದ ಕೆಲವು ಸಲಹೆಗಳನ್ನು ಸರ್ಕಾರದ ಮುಂದಿಡತಕ್ಕದ್ದು ನನ್ನ ಉದ್ದೇಶವಾಗಿದೆ. ನಾನು ಹಿಂದೆ ಬಡ್ಜೆಟ್ ಭಾಷಣವನ್ನು ಮಾಡುವಾಗಲೂಕೂಡ ಈ ಕೆಲವು ಇಲಾಖೆಗಳನ್ನು ಒಂದಾಗಿ ಸೇರಿಸಿ ಆ ಇಲಾಖೆಗಳಿಂದ ದೇಶಕ್ಕೆ ಸಲ್ಲತಕ್ಕ ಸೇವೆ ನೇರವಾಗಿಯೂ ನಿರ್ದಿಷ್ಟವಾಗಿಯೂ ಸಲ್ಲುವಂತೆ ಮಾಡುವುದು ಉಚಿತವೆಂದು ಸಲಹೆ ಕೊಟ್ಟಿದ್ದೇನೆ. ಈ ಸಮಸ್ಯೆಯೂ ಅದರ ಒಂದು ಭಾಗ, ಅದಕ್ಕೇ ಸಂಬಂಧಪಟ್ಟಂತಿದೆಯೆಂದು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ನಾನಾ ಇಲಾಖೆಗಳು ಮೊದಲಿನಿಂದಲೂ ಮಾರದ ಚಿಕ್ಕಪುಟ್ಟ ಕೊಬೆಗಳಹಾಗೆ ಬೆಳೆದುಕೊಂಡು ಬಂದಿವೆ. ಸಮಾಜಕ್ಕೆ ಸೇವೆಸಲ್ಲಿಸುವ ಉದ್ದೇಶದಿಂದ ಆಗಾಗ ಸಣ್ಣಪುಟ್ಟ ಇಲಾಖೆಗಳನ್ನು ಘನೋದ್ದೇಶದಿಂದ ಬೆಳೆಸಿಕೊಂಡು, ಬಲ ಕಟ್ಟಿಕೊಂಡು ಬರಲಾಗಿದೆ. ಆದರೆ ಇವು ಮಾರದಲ್ಲಿ ಹೇಗೆ ಋತು ಧರ್ಮವನ್ನನುಸರಿಸಿ ಹಣ್ಣೆಲೆಗಳು ಉದುರಿಹೋಗಿ ಹೊಸ ಎಲೆಗಳು ಹುಟ್ಟುತ್ತವೆಯೋ ಹಾಗೆ ಬೀಳುವುದಿಲ್ಲ. ಸಮಾಜಕ್ಕೆ ಇವುಗಳ ಸೇವೆ ನ್ಯಾಯವಾಗಿ ಎಷ್ಟುಕಾಲ ಸಲ್ಲುತ್ತದೆಂಬುದನ್ನು ಇವು ದೃಢಪಡಿಸಿಕೊಂಡಿರುವುದಿಲ್ಲ. ಉದಾಹರಣೆಗೆ, ಪಾನನಿರೋಧ ಕಾರ್ಯವನ್ನು ದೇಶದಲ್ಲಿ ಅನುಸರಿಸಬೇಕಾದರೆ ಯಾವ ನೀತಿನಿಯಮಗಳನ್ನನುಸರಿಸಬೇಕೆಂಬ ಬಗ್ಗೆ ಅಂಕಿಅಂಶಗಳನ್ನು ಶೇಖರಿಸಬೇಕಾದರೆ, ಅವಕಾಶ ದೊರೆತಾಗ ಸರ್ಕಾರದ ಮುಂದಿಡಬೇಕಾದರೆ ಕೆಲಸ ಸುಲಭವಾಗಲೆಂದು Temperance Federation ಎಂದು ಒಂದು ಸಂಸ್ಥೆಯನ್ನು ಸರ್ ಮಿರ್ಜಾ ರವರ ಕಾಲದಲ್ಲಿ ಇಟ್ಟಿದ್ದರು. ಅದರ ಕೆಲಸ ಕುಡಿತದಿಂದಾಗುವ ಕುಂದುಕೊರತೆಗಳನ್ನು, ಅನಾಹುತಗಳನ್ನು ಸಮಾಜಕ್ಕೆ ತಿಳಿಸುವುದು. ಸರ್ಕಾರದವರು ಬೇಗ ಕಾನೂನು ತರುತ್ತಾರೆ ಎನ್ನುವ ಮಟ್ಟದಲ್ಲಿ ಅದಿತ್ತು. ಅಧಿಕಾರಿಗಳಿಗೆ ಶಿಕ್ಷಣಕೊಟ್ಟು ಕೆಲಸಮಾಡಿಸುತ್ತಿದ್ದರು. ಇತ್ತೀಚೆಗೆ ಹಿಂದಿನ ಸರ್ಕಾರ ಅಳಿದ ಹೋಗುವುದರಲ್ಲಿದ್ದಾಗ ಪಾನನಿರೋಧವನ್ನು ಕ್ರಮಬದ್ಧವಾಗಿ ತೆಗೆದುಕೊಂಡಿತು. ಆ ಮೇಲೆ ಟೆಂಪರೆನ್ಸ್ ಫೆಡರೇಷನ್ ಸಂಸ್ಥೆ ಹೋಯಿತು. ಹೀಗೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಹೊಸ ಸಂಸ್ಥೆಗಳು ಬಂದುತ್ತವೆ, ಕೆಲವು ಕಾಲ ಕೆಲಸಮಾಡುತ್ತವೆ ಸಾಮಾನ್ಯವಾಗಿ ಸುಮ್ಮನೆ ಇಲಾಖೆಗಳನ್ನಿಟ್ಟುಕೊಂಡಿರುತ್ತಾರೆ. ಅವುಗಳ ಕೆಲಸಗಳನ್ನು ಆಗಾಗ ಪರಿಶೀಲನೆಮಾಡಿ, ದೇಶದಲ್ಲಿ ಅವುಗಳಿಗಾಗುವ ಖರ್ಚೆಷ್ಟು, ಆ ಸಂಸ್ಥೆಗಳು ಸೇವೆಸಲ್ಲಿಸುವುದು ಎಷ್ಟು ಎಂಬುದನ್ನು ತಲನಮಾಡಿ, ಏನೂ ಪ್ರಯೋಜನ ಕರವಾದ ಕೆಲಸಮಾಡಿದಿರುವ ಸಂಸ್ಥೆಗಳನ್ನು ಏಕೆ ನಿಲ್ಲಿಸಬಾರದೆಂಬ ಪ್ರಶ್ನೆಗೆ ಕೈಹಾಕುವುದಿಲ್ಲ. ಒಂದು ಸಲ ಒಂದು ಇಲಾಖೆಯನ್ನು ಪ್ರಾರಂಭಮಾಡಿದರೆ, ಏನೋ ಕೆಲಸಮಾಡುತ್ತಿದೆ, ಇದ್ದುಕೊಂಡುಹೋಗಲಿ ಎಂಬ ಮನೋಧರ್ಮದಿಂದ ಇಟ್ಟುಕೊಂಡುಬರುತ್ತಾರೆ. ಏನೋ ಕೆಲಸ ನಡೆಯುತ್ತಿದೆ ಎಂದು ಸರ್ಕಾರಕ್ಕೆ ಕಾಣುತ್ತದೆ. ಮತ್ತು ಆ ಸಂಸ್ಥೆಗಳಿಗೂಕೂಡ ಏನೋ ನುಮ್ಮನೆ ಇರುವುದಕ್ಕೆ ಬದಲು ಕೆಲಸಮಾಡುತ್ತಿದ್ದೇವೆ ಎಂಬ ಮನೋಭಾವ ಬರುತ್ತದೆ. ಉದಾಹರಣೆಗೆ, ಸ್ಕೌಟ್ ಸಂಸ್ಥೆಯನ್ನು ತೆಗೆದುಕೊಂಡರೆ, ಈ ಸಂಸ್ಥೆ ನಮ್ಮ ದೇಶಕ್ಕೆ ಹೊಸದಲ್ಲ ನಾನಾ ದೇಶಗಳಲ್ಲಿಯವಕರಿಗೆ ತರಪೇತುಕೊಡುವ ದೃಷ್ಟಿಯಿಂದ, ದೇಶದಲ್ಲಿ ಸಮಾಜದಲ್ಲರುವ ಲೋಪದೋಷಗಳನ್ನು ತೋರಿಸಿ ಸರಿಪಡಿಸಲು ಯಾರು ಯಾರು ಸರಿಯಾಗಿದವರೆಂಬುದನ್ನು ನೋಡುವ ದೃಷ್ಟಿಯನ್ನಿಟ್ಟುಕೊಂಡು ಸ್ಕೌಟ್ ಸಂಸ್ಥೆಯನ್ನು ಬೆಳೆಸಿದ್ದಾರೆ. ಅದು ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆಗೆ ಈ ಹೊತ್ತಿನ ದಿನ ಏನು ಸ್ಥಾನ ಕೊಡಬೇಕು, ಯಾವಯಾವ ಕಾರ್ಯಗಳನ್ನು ಇದು ಮಾಡಬಹುದು, ಈ ಸಂಸ್ಥೆಗೆ ದೇಶದಲ್ಲಿಗತಕ್ಕ ಯಾವಯಾವ ಸಂಸ್ಥೆಗಳನ್ನು ಸೇರಿಸಿದರೆ ಯಶಸ್ವಿಯಾಗಿ ಇದರ ಉದ್ದೇಶವನ್ನು ಕಾರ್ಯಗತ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ಯೋಚಿಸಬೇಕು.

4-30 P.M.

ಇದೇ ರೀತಿಯಾಗಿ ಆ ರೆಡ್ ಕ್ರಾಸ್ ಸೊಸೈಟಿಯೂ ಆಗಿದೆ. ಪ್ರಪಂಚದಲ್ಲಿ ಸೇವಾ ಮನೋವೃತ್ತಿಯಿರತಕ್ಕಂಥ ಸಂಸ್ಥೆಗಳ ಪೈಕಿ ಇದು ಬಹಳ ದೊಡ್ಡದು. ಈ ಸಂಸ್ಥೆಯ ವ್ಯಾಪ್ತಿ ಪ್ರಪಂಚದಾದ್ಯಂತವೂ ಹರಡಿದೆ. ಹೀಗೆ ಈ ರೆಡ್‌ಕ್ರಾಸ್ ಸೊಸೈಟಿಯವರ ಆಡಳಿತ, ವ್ಯಾಪ್ತಿ ಮತ್ತು ಈ ಸಂಸ್ಥೆಯ ಒಂದು ವೈಶಿಷ್ಟ್ಯ ಇತ್ಯಾದಿಗಳೆಲ್ಲಾ ಬಹಳ ಉನ್ನತ ಮಟ್ಟದವುಗಳಾಗಿರು